೨. ಸದರಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಗಳು ಹಿಂದೆ ಕೇಂದ್ರ ಸರ್ಕಾರದಲ್ಲಿ ಎನ್‌ಡಿಎಸ್ ಇನ್ಸ್‌ಟ್ರಕ್ಟರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದು, ಆಗಸ್ಟ್ ೧೯೭೬ರಲ್ಲಿ ಇವರ ಸೇವೆಯನ್ನು ರಾಜ್ಯ ಸರ್ಕಾರದ ಸೇವೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಅಂದರೆ ೧೯೭೬ರ ನಂತರ, ಇದುವರೆಗೆ ರಾಜ್ಯ ಸರ್ಕಾರವು ತನ್ನ ನೌಕರರಿಗೆ ೩ ಸಲ ವೇತನ ಪರಿಷ್ಕರಣೆ ಮಾಡಿದ್ದು. ಈ ಎಲ್ಲಾ ಪರಿಷ್ಕೃತ ವೇತನ ಶ್ರೇಣಿಗಳ ಲಾಭವನ್ನು ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಗಳು ಪಡೆದಿರುತ್ತಾರೆ. ಇದಲ್ಲದೆ ಇವರುಗಳು ೧೯೭೭ರಿಂದ ೧೯೭೩ರವರೆಗೆ ಕೇಂದ್ರ ಸರ್ಕಾರದ ಪರಿಷ್ಕೃತ ವೇತನ ಶ್ರೇಣಿಗಳನ್ನು ಸಹ ತಪ್ಪಾಗಿ ಮಂಜೂರು ಮಾಡಬೇಕೆಂದು ಕೋರಿದ್ದು, ಇದನ್ನು ಕೇಂದ್ರ ಸರ್ಕಾರವು ಮೇ ೧೯೮೬ರಲ್ಲಿ ಮಂಜೂರು ಮಾಡಿ ಈ ಶ್ರೇಣಿಗಳಲ್ಲಿ ಇವರುಗಳ ವೇತನವನ್ನು ನಿಗದಿಪಡಿಸುವುದರಿಂದ ಉದ್ಭವಿಸುವ ಬಾಕಿ ಹಣವನ್ನು ಇವರಿಗೆ ಕೆಲವು ವಿಯಮಾವಳಿಗಳನ್ವಯ ಪಾವತಿಸಿದ ನಂತರ ಪಾವತಿ ಮಾಡಲು ಆದೇಶಿಸಿತ್ತು. ಅದರಂತೆ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳಿಗೆ ಇವರುಗಳ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಗಳಲ್ಲಿ (ಕೇಂದ್ರ ಸರ್ಕಾರದ) ನಿಗಧಿಪಡಿಸಿ ಇದರಿಂದ ಉದ್ಭವಿಸಿರುವ ಬಾಕಿ ಹಣವನ್ನು ಇವರುಗಳಿಗೆ ಪಾವತಿ ಮಾಡಲಾಗಿದೆ. ಸದರಿ ವೇತನ ನಿಗಧೀಕರಣವು ೧೯೭೬ರ ವರೆಗೆ ಎಂದರೆ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾ ಅಧಿಕಾರಿಗಳ ಸೇವೆ ರಾಜ್ಯ ಸರ್ಕಾರದಲ್ಲಿ ವಿಲೀನಗೊಂಡವರೆಗೆ ಪರಾತ್ರ ಮಾಡಲಾಗಿದ್ದು, ದಿನಾಂಕ ೧-೧-೧೯೭೩ ರಿಂದ ಕೇಂದ್ರ ಸರ್ಕಾರ ಇವರುಗಳ ನಿಗಧಿಪಡಿಸಿದ್ದ ವೇತನವನ್ನು ದಿನಾಂಕ ೧-೮-೧೯೭೬ರಿಂದ ಈ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ಮೇಲೆ ಇವರ ವೇತನವನ್ನು ಪುನರ್ ನಿಗಧಿಪಡಿಸಲಾಗಿದೆ.

೩. ಕೇಂದ್ರ ಸರ್ಕಾರದ ಆದೇಶದಂತೆ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳಿಗೆ ೧೯೭೬ರವರೆಗೆ ಇವರುಗಳ ವೇತನವನ್ನು ಕೇಂದ್ರ ಸರ್ಕಾರದ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ನಿಗಧಿಪಡಿಸಿ ಇದರಿಂದ ಉದ್ಭವಿಸುವ ಬಾಕಿ ಹಣವನ್ನು ಇವರುಗಳಿಗೆ ಈಗಾಗಲೇ ಪಾವತಿ ಮಾಡಲಾಗಿದೆ ಮತ್ತು ಸದರಿ ನಿಗಧೀಕರಣದ ಸ್ಯಾಂಪಲ್ ಕೇಸನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

3 ವರ್ಷದ ನಂತರ ಅಧಿಕಾರಿಗಳ ವರ್ಗಾವರ್ಗಿ

೨೬೫೭. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ):— ಪೂರ್ತ ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(೧) ಎಲ್ಲಾ ಇಲಾಖೆಗಳಲ್ಲೂ ೩ ವರ್ಷದ ನಂತರ ಅಧಿಕಾರಿಗಳ ವರ್ಗಾವರ್ಗಿ ನಡೆಸಿದ ಹಾಗೆ ವಾರ್ತಾ ಇಲಾಖೆಯಲ್ಲಿ ಮಾಡದಿರಲು ಇರುವ ಅಡ್ಡಿಗಳೇನು?

(೨) ಈಗಾಗಲೇ ಹಲವರು ೩ ವರ್ಷ ಒಂದೇ ಸ್ಥಳದಲ್ಲಿರುವವರನ್ನು ಇತರ ಇಲಾಖೆಗಳಲ್ಲಿ ವರ್ಗಾಯಿಸಿರುವಂತೆ ವಾರ್ತಾ ಇಲಾಖೆಯಲ್ಲಿ ಪಾಲಿಸಲಾಗುವುದೇ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

(೧) ಆಡಳಿತಾತ್ಮಕ ದೃಷ್ಟಿಯಿಂದ ವರ್ಗಾವಣೆಗಳನ್ನು ಮಾಡಲಾಗುತ್ತಿದೆ.

(೨) ಪಾಲಿಸಲಾಗುವುದು.